**ವ್ಯಾಖ್ಯಾನ** Date: 02.06.2025

# ಗುರು ಕರುಣ ಹೊಂದುವುದು ಪರಮ ದುರ್ಲಭವಯ್ಯ

ಇದೊಂದು ಪುರಂದರ ದಸರ ಉಗಾಭೋಗ.

**ಗುರು ಕರುಣ ಹೊಂದುವುದು ಪರಮ ದುರ್ಲಭವಯ್ಯ**
**ಪರಿಪರಿ ವ್ರತಗಳ ಚರಿಸಲು ಫಲವೇನು**
**ಶರೀರಾದಿ ಪುತ್ರ ಮಿತ್ರ ಕಳತ್ರ ಬಾಂಧವರು**
**ಇರಿಸೋರೆ ಸದ್ಗತಿಗೆ ಸಾಧನದಿ ನಿರುತವು**
**ಗುರುಪಾದ ನಿಜವಾಗಿ ಮನದಲ್ಲಿರಿತು ಭಜಿಸಲು**
**ಅಖಿಲ ಸಂಪದವಕ್ಕು ಪುರಂದರ ವಿಠಲ**

ಶ್ರೀ ಪುರಂದರ ದಾಸರು ನವಕೋಟಿ ನಾರಾಯಣರಾಗಿದ್ದವರು, ಹೇಳುವ ಮಾತು ಗುರುಪಾದ ನಿಜವಾಗಿ ಅರಿತು ಭಜಿಸಲು ಸಕಲ ಸಂಪದವಕ್ಕು.

ಇದ್ದ ಸಂಪತ್ತನ್ನು ಬಿಟ್ಟು ಬಂದವರು ಹೇಳುತ್ತಿರುವ ಸಂಪತ್ತು ಯಾವುದಿರಬಹುದು.?
ನಿಮ್ಮ ಊಹೆ ಮೋಕ್ಷ ಎಂದಾಗಿದ್ದರೆ, ಸರಿಯಾಗಿ ಉಹಿಸಿದ್ದೀರಿ.
ಏಕೆಂದರೆ, ಅಖಿಲ ಸಂಪತ್ತು ದೊರೆಯುವುದು ಅಲ್ಲಿ ಮಾತ್ರ.

**ಯದ್ಗುರು ಸುಪ್ರಸನ್ನ ಸನ್ ದದ್ಯಾತ್ತಾನಾನ್ಯಥಾ ಭವೇತ್**

ಗುರುಗಳು ಶಿಷ್ಯರ ಮೇಲೆ ಪ್ರಸನ್ನರಾಗಿ ಕೊಟ್ಟದ್ದು ಅನ್ಯಥಾ ಆಗುವುದೇ ಇಲ್ಲ. ಅದು ಒಳ್ಳೆಯದೇ ಆಗುವುದು. ಅದೇ ಸಂಸಾರದ ಬಿಡುಗಡೆಗೆ ಬೇಕಾದ ಸಾಧನವೇ ಆಗುತ್ತದೆ.

ಈ ಉಗಾಭೋಗದಲ್ಲಿ ಗುರುಗಳ ಕುರಿತು ಹೇಳಿದಂತೆಯೇ ಶ್ರೀ ವರದ ಗೋಪಾಲ ವಿಟ್ಠಲರ ಕೀರ್ತನೆಯ ಸಾಲುಗಳು ಕೂಡ ಇವೆ

***ಗುರುಗಳಿಗಿಂತಧಿಕ ಇನ್ನಾರು ಆಪ್ತರು ನಿನಗೆ ಗುರುಗಳೇ ಪರಮ ಹಿತಕರರು ನೋಡು.....**

ತಂದೆ, ತಾಯಿ, ಬಂಧು ಬಳಗ ಎಲ್ಲರೂ ಸಂಸಾರದ ಬಂಧಕರಾದರೆ, ಗುರುಗಳೊಬ್ಬರು ಮಾತ್ರ ಸಂಸಾರ ಮೋಚಕರು.

ಅಂಬರ, ವಾರಿದ, ಭೂ, ಪಿತ, ಜನನಿ ಈ ಕ್ರಮದಲ್ಲಿ ಚರಿಸಿ ಜೀವ ಭೂಮಿಗೆ ಬರುತ್ತಾನೆ.
ಅಂದರೆ ಮೇಲಿದ್ದವ ಕೆಳಗೆ ಇಳಿಯಲು ಕಾರಣರಾದವರು ಈ ತಂದೆ ತಾಯಿಗಳಾದರೆ, ಜ್ಞಾನ ಕೊಟ್ಟು ಉತ್ತಮ ಊರ್ಧ್ವ ಲೋಕ ಹೊಂದಿಸುವವರು ಗುರುಗಳು.
ಆದ್ದರಿಂದ ಗುರುಗಳನ್ನು ಹೊಂದಬೇಕು.
ಆದರೆ ಗುರು ಕರುಣ ದೊರೆಯುವುದು ಅಷ್ಟು ಸುಲಭವಲ್ಲ ಎನ್ನುತ್ತಾರೆ ದಾಸರು.
ಆದರೆ ಗುರು ಕರುಣೆಯಾದರೆ ಸಾಕು ಓದದೆಯೇ ಸಕಲ ಶಾಸ್ತ್ರಜ್ಞಾನ ಬಂದು ಬಿಡುತ್ತದೆ.
ಇದಕ್ಕೆ ಉಪನಿಷತ್ತಿನಲ್ಲಿ ಅನೇಕ ಉದಾಹರಣೆಗಳನ್ನು ಕಾಣುತ್ತೇವೆ.

ಧೌಮ್ಯ ಋಷಿಗಳ ಶಿಷ್ಯ ಆರುಣಿ ಗುರುಗಳ ಗದ್ದೆಯಲ್ಲಿ ನೀರು ಹರಿಯುವುದನ್ನು ತಡೆಯಲು ಸಾಧ್ಯವಾಗದೇ ತಾನೇ ಅಡ್ಡಲಾಗಿ ಮಲಗುತ್ತಾನೆ.
ಆಗ ಅವನನ್ನು ಹುಡಿಕಿಕೊಂಡು ಬಂದ ಗುರುಗಳ ಹೇಳಿದ ಮಾತುಗಳಿವು —

> **"ನನ್ನ ವಚನವನ್ನು ಪರಿಪಾಲಿಸಿದುದಕ್ಕಾಗಿ ನಿನಗೆ ಶ್ರೇಯಸ್ಸು ದೊರೆಯುತ್ತದೆ. ಸರ್ವ ವೇದಗಳು ಮತ್ತು ಸರ್ವ ಧರ್ಮಶಾಸ್ತ್ರಗಳು ನಿನ್ನಲ್ಲಿ ಪ್ರತಿಭೆಗೊಳ್ಳುತ್ತವೆ"**

ನಮ್ಮೆಲ್ಲರ ಅಹೋ ಭಾಗ್ಯ ಮಧ್ವರಂಥ ಗುರುಗಳನ್ನು, ಅವರ ಶಾಸ್ತ್ರವನ್ನು ಕನ್ನಡಕ್ಕೆ ತಂದುಕೊಟ್ಟ ಅನೇಕ ದಾಸರುಗಳನ್ನು ಗುರುಗಳಾಗಿ ಪಡೆದಿದ್ದೇವೆ. ಅವರ ರಚನೆಗಳನ್ನು ಅಧ್ಯಯನ ಮಾಡುವ ಭಾಗ್ಯ ದೊರೆಯಲಿ ಎಂದು ಪ್ರಾರ್ಥಿಸೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ